**ಓ ಎಸ್ ನಂಃ 168-2021** **ಪಿ ಡಬ್ಲ್ಯೂ - 1**

**ಸಾಕ್ಷಿಯನ್ನು ದಿನಾಂಕಃ 05.08.2022 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ ಎಮ್ ಎಸ್ ಡಿ ವಕೀಲರಿಂದ

ನನ್ನ ಮೌಖಿಕ ಮುಖ್ಯವಿಚಾರಣೆಯ ಬದಲಿಗೆ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿದ್ದು ಅದರಲ್ಲಿ ನಾನು ನನ್ನ ಸಹಿ ಹಾಕಿರುತ್ತೇನೆ.

ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಈ ಖಾತಾ ಉತಾರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ1 ಎಂದು, 4 ತೆರಿಗೆ ನಮೂನೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ2 ರಿಂದ 5 ಎಂದು ಗುರುತಿಸಲಾಯಿತು.

**ಪಾಟೀಸವಾಲುಃಪ್ರತಿವಾದಿಗಳ ಪರ ಶ್ರೀ ಕೆ ಬಿ ಜಿ ವಕೀಲರಿಂದ**

ನನ್ನ ಗಂಡನ ತಂದೆಯ ಹೆಸರು ಲಚ್ಚಪ್ಪ. ಲಚ್ಚಪ್ಪನಿಗೆ 4 ಜನ ಮಕ್ಕಳು. ಲಚ್ಚಪ್ಪನ ಮಗ ರಾಮಪ್ಪನಿಗೆ 3 ಜನ ಮಕ್ಕಳು. ಅವರೆಂದರೆ ಶಿವಕುಮಾರ, ಸುನೀತಾ ಮತ್ತು ರಾಜು. ಲಚ್ಚಪ್ಪನ ಹೆಸರಿನಲ್ಲಿ 1 ಎಕರೆ ಹೊಲದ ಜಮೀನು ಇದೆ ಅಂದರೆ ಸರಿಯಲ್ಲ. ಹುಲಿಕಟ್ಟಿ ತಾಂಡದಲ್ಲಿ 2 ಮನೆಗಳು ಇವೆ ಅಂದರೆ ಸರಿ. ಅವುಗಳ ಪೈಕಿ 1 ಮನೆಯನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿದ್ದೇನೆ ಅಂದರೆ ಸರಿ. ಆಸ್ತಿ ಸಂಖ್ಯೆ 135 ನಮ್ಮ ಕುಟುಂಬಕ್ಕೆ ಸೇರಿದ್ದು ಅಂದರೆ ಸಾಕ್ಷಿಯು ಲಚ್ಚಪ್ಪನಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಸದರಿ 2 ಮನೆಗಳು ರಾಮಪ್ಪನಿಗೆ ಸರ್ಕಾರದಿಂದ ಕೊಟ್ಟಂತಹ ಜಾಗಗಳು ಅಂದರೆ ಸರಿಯಲ್ಲ. ಸದರಿ 2 ಮನೆಗಳು ಲಚ್ಚಪ್ಪನಿಗೆ ಸೇರಿದ್ದು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ 2 ಮನೆಗಳ ಕಂದಾಯವನ್ನು ರಾಮಪ್ಪನ ವಾರಸುದಾರರು ಕಟ್ಟುತ್ತಿದ್ದಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತಾನು ಕಟ್ಟುತ್ತಿರುವುದಾಗಿ ನುಡಿಯುತ್ತಾರೆ. ನನ್ನ ಗಂಡನ ಸಹೋದರಿಯರನ್ನು ಈ ದಾವಾದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಮೃತ ರಾಮಪ್ಪನ ಎಲ್ಲಾ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಮೃತ ಲಚ್ಚಪ್ಪ ಮತ್ತು ಆತನ ಹೆಂಡತಿ ಪುಟ್ಟವ್ವ ಮುಂಡಗೋಡ ತಾಲ್ಲೂಕಿನ ಅಗಡಿ ತಾಂಡದಲ್ಲಿ ವಾಸವಾಗಿದ್ದರು ಅಂದರೆ ಸರಿಯಲ್ಲ. ಸದರಿ ಅಗಡಿ ತಾಂಡದಲ್ಲಿರುವ 5 ಎಕರೆ ಜಮೀನನ್ನು ನನ್ನ ಮಾವ ಮತ್ತು ಅತ್ತೆ ಹೊಂದಿದ್ದರು ಅಂದರೆ ಸರಿಯಲ್ಲ. 2ನೇ ವಾದಿಯು ಅಗಡಿ ತಾಂಡದಲ್ಲಿ ವಾಸವಾಗಿದ್ದಾರೆ. ಅಗಡಿ ತಾಂಡದಲ್ಲಿ 2ನೇ ವಾದಿಗೆ ಸೇರಿದ ಮನೆ ಇದೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ಗುಂಟೆ ಜಮೀನನ್ನು ಖರೀದಿ ಮಾಡಿ ಶೆಡ್ಡನ್ನು ನಿರ್ಮಿಸಿಕೊಂಡು ಅಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಶೆಡ್ಡನಲ್ಲಿ ನನ್ನ ಮಾವ ಸಹ ವಾಸವಾಗಿದ್ದರು ಅಂದರೆ ಸರಿಯಲ್ಲ.

ಸದರಿ 1 ಗುಂಟೆ ಜಮೀನಿಗೆ ಇನ್ನೂ ಯಾವುದೇ ನಂಬರ ಕೊಟ್ಟಿಲ್ಲ. ದಾವಾ ಆಸ್ತಿಯ ಸಂಖ್ಯೆ ಮತ್ತು ಚೆಕ್ಕುಬಂದಿ ಗೊತ್ತಿಲ್ಲ. ನಾನು ಅಗಡಿ ತಾಂಡದಲ್ಲಿ ವಾಸವಾಗಿದ್ದೇನೆ ಅಂದರೆ ಸರಿ.

**ಮುಂದುವರೆದ ಪಾಟೀಸವಾಲುಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**